ಕರ್ನಾಟಕ ಸರ್ಕಾರ

ಸಂ:ಸಲನಿ/ಇಡಿ-/ಸ್ಕಿಆರ್-02/2016-17

ಸಮಾಜ ಕಲ್ಯಾಣ ಆಯುಕ್ತರ ಕಛೇರಿ
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು.ದಿನಾಂಕ:09.02.2017

ಎಲ್ಲಾ ಜಂಟಿ/ಉಪ ನಿರ್ದೇಶಕರುಗಳು,
ಎಲ್ಲಾ ಸಹಾಯಕ ನಿರ್ದೇಶಕರು ಗ್ರೇಡ್-1/ಗ್ರೇಡ್-2
ಸಮಾಜ ಕಲ್ಯಾಣ ಇಲಾಖೆ,
----------------ಜಿಲ್ಲೆ

ಮಾನ್ಯರೆ,

ವಿಷಯ ಡಿ.ಬಿ.ಟಿ (DBT-Direct Benefit Transfer) ಅನುಷ್ಠಾನಗೊಳಿಸಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಆಧಾರ್ ಸಂಖ್ಯೆಯ ಬಳಕೆಗೆ ಒಪ್ಪಿಗೆ ಪತ್ರವನ್ನು ಪಡೆಯುವ ಕುರಿತು.

ಉಲ್ಲೇಖ 1 ಅಪರ ಮುಖ್ಯ ಕಾರ್ಯದರ್ಶಿಗಳು, ಆಥಿಕ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 19.01.2017ರಂದು ನಡೆದ ಡಿ.ಬಿ.ಟಿ ಸಭೆ

2 ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪ್ರಾಥಮಿಕ & ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ ರವರ ಸುತ್ತೋಲೆ ಸಂಖ್ಯೆ: ಸಕಇ:574:ಪಕವಿ:2016(ಭಾ) ದಿನಾಂಕ: 31.01.2017

3 ಸಮಾಜ ಕಲ್ಯಾಣ ಇಲಾಖಾ ಟೆಲಿಗ್ರಾಂ ಗುಂಪಿನಲ್ಲಿ ತಿಳಿಸಿರುವ ಸೂಚನೆಗಳು

ಉಲ್ಲೇಖ(1)ರಂತೆ 2016-17ನೇ ಸಾಲಿನಲ್ಲಿ ಈಗಾಗಲೇ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಪಡೆದಿರುವ ಹಾಗೂ ಪಡೆಯಬೇಕಾದ ಅಭ್ಯರ್ಥಿಗಳನ್ನು ಇಲಾಖಾ ವೆಬ್‌ಸೈಟ್‌ನಿಂದ ಆನ್‌ಲೈನ್ ಮೂಲಕ ಆಧಾರ್ ಸಮ್ಮತಿಯನ್ನು ನೀಡಲು ಈಗಾಗಲೇ ಸೂಚಿಸಲಾಗಿರುತ್ತದೆ. ಈ ಬಗ್ಗೆ ಸಮ್ಮತಿ ನೀಡಲು Online consent Form ಅನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುತ್ತದೆ.

ಈ ಬಗ್ಗೆ ತಮ್ಮ ವ್ಯಾಪ್ತಿಗೊಳಪಡುವ ತಾಲ್ಲೂಕುಗಳಿಗೆ ಸಂಬಂಧಪಟ್ಟ ಮೆಟ್ರಿಕ್ ನಂತರದ ವಿದ್ಯಾಥಿವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ಕಾಲೇಜುಗಳ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಈ ಬಗ್ಗೆ ಅರಿವು ಮೂಡಿಸಿ ಈ ಕಾರ್ಯಕ್ರಮವನ್ನು ಫೆಬ್ರವರಿ 15ನೇ 2017 ತಾರೀಖಿನೊಳಗಾಗಿ ಪೂರ್ಣಗೊಳಿಸಲು ತಮಗೆ ಸೂಚನೆ ನೀಡಲಾಗಿತ್ತು.

ಮುಂದುವರೆದು ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಿಂದಲೂ ತಮ್ಮ ಆಧಾರ್ ಸಮ್ಮತಿಯನ್ನು ಭಾರತ ಸರ್ಕಾರದ ನಿಯಮಾನುಸಾರ ಪಡೆಯಬೇಕಾಗಿರುತ್ತದೆ. ಈಗಾಗಲೇ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿ ಅವರ ಖಾತೆಗೆ ಜಮಾ ಮಾಡಿದ್ದರೂ ಸಹ ಅಂತಹ ಮಕ್ಕಳಿಂದಲೂ ಸಮ್ಮತಿಯನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ 2016-17ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಿಂದ ಉಲ್ಲೇಖ(2)ರ ಸುತ್ತೋಲೆಯಲ್ಲಿ ತಿಳಿಸಿರುವ ಸೂಚನೆಗಳನ್ವಯ ಕ್ರಮವಹಿಸುವುದು. (consent Form ಮತ್ತು ಸುತ್ತೋಲೆ ಪ್ರತಿಗಳನ್ನು ಲಗತ್ತಿಸಿದೆ). ಆದ್ದರಿಂದ ಈ ಕೂಡಲೇ ಆಧಾರ್ ಸಂಖ್ಯೆಯ ಬಳಕೆಗೆ ಒಪ್ಪಿಗೆ ಪತ್ರ ಪಡೆಯುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಸೂಚಿಸಲಾಗಿದೆ

ತಮ್ಮ ನಂಬುಗೆಯ,

10.02.17

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 574 ಪಕವಿ 2016 (ಭಾ)

ಸಮಾಜ ಕಲ್ಯಾಣ ಸಚಿವಾಲಯ,
# 232, 2ನೇ ಮಹಡಿ,
ವಿಕಾಸಸೌಧ, ಬೆಂಗಳೂರು,
ದಿನಾಂಕ: 30-1-2017.

## ಸುತ್ತೋಲೆ

ವಿಷಯ: ಡಿಬಿಟಿ ಅನುಷ್ಠಾನಗೊಳಿಸಲು ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಂದ ಆಧಾರ್ ಸಂಖ್ಯೆ ಬಳಕೆಗೆ ಒಪ್ಪಿಗೆ ಪತ್ರ ಪಡೆಯುವ ಕುರಿತು.

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಪತ್ರ ಸಂಖ್ಯೆ: ಎಫ್‌ಡಿ/ 06/ ಸಿಎಂ/ 2013 ದಿನಾಂಕ: 19-1-2017.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಉಲ್ಲೇಖಿತ ಪತ್ರದನ್ವಯ ಎಲ್ಲಾ ಡಿಬಿಟಿ ಆಧಾರಿತ ಪಾವತಿಗಳನ್ನು ಕೇಂದ್ರ ಪುರಸ್ಕೃತ ಯೋಜನೆಗಳಿಗೆ 31-1-2017 ರೊಳಗಾಗಿ ಹಾಗೂ ರಾಜ್ಯ ವಲಯ ಕಾರ್ಯಕ್ರಮಗಳಿಗೆ ದಿನಾಂಕ: 30-6-2017 ರೊಳಗಾಗಿ ಫಲಾನುಭವಿಗಳಿಗೆ ತಲುಪಿಸಲು ಉದ್ದೇಶಿಸಲಾಗಿದೆ. ಈ ಸಲುವಾಗಿ ಭೌತಿಕ ಒಪ್ಪಿಗೆ ಪತ್ರವನ್ನು ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಸಂಬಂಧ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳ ಮುಖೇನ ವಿದ್ಯಾರ್ಥಿಗಳ ಭೌತಿಕ ಒಪ್ಪಿಗೆ ಪತ್ರವನ್ನು ಫೆಬ್ರವರಿ 15, 2017 ರೊಳಗಾಗಿ ಪಡೆಯಲು ಉದ್ದೇಶಿಸಲಾಗಿದೆ.

ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಯ ಪ್ರಕಾರ್ಯ / ಜವಾಬ್ದಾರಿಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ:

**ತಾಲ್ಲೂಕು ಮಟ್ಟದ ಸಮಾಜ ಕಲ್ಯಾಣ ಅಧಿಕಾರಿಗಳು:**

1) ಶಾಲೆಯ ಹೆಸರು, ವಿದ್ಯಾರ್ಥಿಯ ಹೆಸರು ಹಾಗೂ ತರಗತಿ ವಿವರಗಳುಳ್ಳ ಸಮಾಜ ಕಲ್ಯಾಣ ಇಲಾಖೆಯ ಫಲಾನುಭವಿಗಳ ಶಾಲಾವಾರು ಪಟ್ಟಿಯನ್ನು ತಯಾರಿಸುವುದು.

2) ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪಡೆಯಬೇಕಾಗಿರುವ ಪ್ರತ್ಯೇಕ ಒಪ್ಪಿಗೆ ಪತ್ರವನ್ನು ಮುದ್ರಿಸುವುದು. ಪೂರ್ವನಿರ್ಧರಿತ ಒಪ್ಪಿಗೆ ಪತ್ರಗಳನ್ನು ಮಾದರಿಯನ್ನು ಇಲಾಖಾ ವೆಬ್ ಪೋರ್ಟಲ್ http://sw.kar.nic.in ನಲ್ಲಿ ಒದಗಿಸುವುದು.

3) ವಿದ್ಯಾರ್ಥಿಯ ಹೆಸರು, ಶಾಲೆ, ತರಗತಿ, ಮುಂತಾದ ವಿವರಗಳುಳ್ಳ ಫಲಾನುಭವಿಗಳ ಶಾಲಾವಾರು ಪಟ್ಟಿ ಹಾಗೂ ಒಪ್ಪಿಗೆ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಒಪ್ಪಿಸುವುದು.

4) ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ವಿದ್ಯಾರ್ಥಿಗಳ ಒಪ್ಪಿಗೆ ಪತ್ರವನ್ನು ಪಡೆಯುವುದು.

5) ಸದರಿ ಒಪ್ಪಿಗೆ ಪತ್ರಗಳನ್ನು ಕ್ರೋಢೀಕರಿಸಿ ಇಲಾಖಾ ವೆಬ್ ಪೋರ್ಟಲ್ http://sw.kar.nic.in ನಲ್ಲಿ ಅಳವಡಿಸುವುದು.

6) ಭೌತಿಕ ಒಪ್ಪಿಗೆ ಪತ್ರಗಳನ್ನು ಕನಿಷ್ಠ 5 ವರ್ಷಗಳ ಕಾಲ ವ್ಯವಸ್ಥಿತವಾಗಿ ಕಾಪಾಡುವುದು.

**ಕ್ಷೇತ್ರ ಶಿಕ್ಷಣಾಧಿಕಾರಿಗಳು**

1) ಶಾಲಾವಾರು ವಿದ್ಯಾರ್ಥಿಗಳ ಪಟ್ಟಿ ಹಾಗೂ ಪ್ರತ್ಯೇಕ ಭೌತಿಕ ಒಪ್ಪಿಗೆ ಪತ್ರವನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಪಡೆಯುವುದು.

2) ಸದರಿ ಬಂಡಲ್‌ಗಳನ್ನು ಶಾಲೆಯ ಮುಖ್ಯ ಶಿಕ್ಷಕರಿಗೆ ನೀಡಿ ತರಗತಿವಾರು ಶಿಕ್ಷಕರಿಗೆ ಹಂಚಲು ಸೂಚಿಸುವುದು.

3) ಸಹಿ ಮಾಡಿದ ಭೌತಿಕ ಒಪ್ಪಿಗೆ ಪತ್ರಗಳನ್ನು ಶಾಲೆಯ ಮುಖ್ಯ ಶಿಕ್ಷಕರಿಂದ ಪಡೆದು ತಾಲ್ಲೂಕು ಮಟ್ಟದ ಸಮಾಜ ಕಲ್ಯಾಣಾಧಿಕಾರಿಗಳಿಗೆ 15 ನೇ ಫೆಬ್ರವರಿ 2017 ಅಥವಾ ಮುಂಚಿತವಾಗಿ ನೀಡುವುದು.

**ಶಿಕ್ಷಕರು:**

1) ಪ್ರತ್ಯೇಕ ಫಲಾನುಭವಿ ಪಟ್ಟಿ ಹಾಗೂ ಒಪ್ಪಿಗೆ ಪತ್ರದ ಬಂಡಲ್‌ಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸುವುದು.

2) ವಿದ್ಯಾರ್ಥಿಗಳಿಗೆ ಮೂಲ ಆಧಾರ್ ಕಾರ್ಡ್ ತರಲು ಸೂಚಿಸುವುದು.

3) ಪ್ರತ್ಯೇಕ ಒಪ್ಪಿಗೆ ಪತ್ರದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಗಳ ಆಧಾರ್ ಸಂಖ್ಯೆ ಸೇರಿದಂತೆ ಮಾಹಿತಿ ಸರಿ ಇದೆಯೆಂದು ದೃಢೀಕರಿಸಿ ಮುಖ್ಯ ಶಿಕ್ಷಕರ ಸಹಿ ಪಡೆಯುವುದು.

4) ಒಪ್ಪಿಗೆ ಪತ್ರದಲ್ಲಿ ಆಧಾರ್ ಸಂಖ್ಯೆ ದಾಖಲಾಗದಿದ್ದ ಪಕ್ಷದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿಯಿಂದ ತನ್ನ ಆಧಾರ್ ಸಂಖ್ಯೆಯನ್ನು ಭರ್ತಿ ಮಾಡಿಸಿ, ವಿದ್ಯಾರ್ಥಿಯ ಮಾಹಿತಿ ಸರಿ ಇದೆಯೆಂದು ದೃಢೀಕರಿಸಿ ವಿದ್ಯಾರ್ಥಿಯ ಸಹಿ ಮತ್ತು ಮುಖ್ಯ ಶಿಕ್ಷಕರ ಸಹಿ ಪಡೆದುಕೊಳ್ಳತಕ್ಕದ್ದು.

5) ಆಧಾರ್ ಹೊರತುಪಡಿಸಿ ಯಾವುದೇ ಮಾಹಿತಿ ತಪ್ಪಿದ್ದಲ್ಲಿ, ಸಂಬಂಧಪಟ್ಟ ವಿದ್ಯಾರ್ಥಿಯೇ ಸರಿಪಡಿಸಿ ಇದನ್ನು ಮುಖ್ಯ ಶಿಕ್ಷಕರು ತಮ್ಮ ಸಮ್ಮುಖದಲ್ಲಿ ಪರಿಶೀಲಿಸಿ ದೃಢೀಕರಿಸುವುದು.

6) ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಬಂಡಲ್‌ಗಳನ್ನು ಸ್ವೀಕರಿಸಿದ ಒಂದು ವಾರದೊಳಗೆ ಮೇಲ್ಕಂಡ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

7) ವಿದ್ಯಾರ್ಥಿಯು ಆಧಾರ್ ಸಂಖ್ಯೆ ಹೊಂದಿರದಿದ್ದಲ್ಲಿ ಹತ್ತಿರದ ಆಧಾರ್ ನೋಂದಣಿ ಕೇಂದ್ರ / ನಾಡಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಸೂಚಿಸುವುದು.

8) ತಿದ್ದುಪಡಿ / ಹೊಸ ದಾಖಲೆ ಅಳವಡಿಸಿದ ಎಲ್ಲಾ ಭೌತಿಕ ಒಪ್ಪಿಗೆ ಪತ್ರಗಳನ್ನು ಪ್ರತ್ಯೇಕ ಬಂಡಲ್‌ಗಳಲ್ಲಿ ತಯಾರಿಸಿ ಡಾಟಾ ಎಂಟ್ರಿ ಮಾಡಿಸುವ ಸಲುವಾಗಿ ತಾಲ್ಲೂಕು ಸಮಾಜ ಕಲ್ಯಾಣ ಕಛೇರಿಗೆ ನೀಡುವುದು.

ಸಮಾಜ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ಎಲ್ಲಾ ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿಗಳು ಈ ಸುತ್ತೋಲೆಯನ್ನು ಕ್ರಮವನ್ನು ಅನುಸರಿಸಿ, ನಿಗದಿತ ಅವಧಿಯೊಳಗೆ ಡಿಬಿಟಿ ಅನುಷ್ಠಾನಗೊಳಿಸಲು ಅನುವು ಮಾಡಿಕೊಡುವುದು. ಇಲ್ಲವಾದಲ್ಲಿ ವಿಷಯವನ್ನು ತೀವ್ರವಾಗಿ ಪರಿಗಣಿಸಲಾಗುವುದೆಂದು ತಿಳಿಯಪಡಿಸಿದೆ.

(ಮಣಿವಣ್ಣನ್.ಪಿ., ಭಾ.ಆ.ಸೇ.)
ಸರ್ಕಾರದ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

(ಅಜಯ್ ಸೇಠ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿ
(ಪ್ರಾಥಮಿಕ & ಪ್ರೌಢ ಶಿಕ್ಷಣ)
ಶಿಕ್ಷಣ ಇಲಾಖೆ

ಇವರಿಗೆ:-

1) ಜಿಲ್ಲಾ / ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು.
2) ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು.
3) ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಅಧೀನದಲ್ಲಿನ ಎಲ್ಲಾ ಮುಖ್ಯ ಶಿಕ್ಷಕರು.
4) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ರವಾನಿಸಿದೆ:-

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
4. ಸಮಾಜ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು.
5. ಕಛೇರಿ ಪ್ರತಿ / ಸೂಚನಾ ಫಲಕ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಕಇ 574 ಪಕವಿ 2016 (ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 06-02-2017

**ತಿದ್ದೋಲೆ**

ಡಿಬಿಟಿ ಅನುಷ್ಠಾನಗೊಳಿಸಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಆಧಾರ್ ಸಂಖ್ಯೆ ಬಳಕೆಗೆ ಒಪ್ಪಿಗೆ ಪತ್ರ ಪಡೆಯುವ ಕುರಿತು ದಿನಾಂಕ: 30-01-2017 ರಂದು ಹೊರಡಿಸಿರುವ ಸುತ್ತೋಲೆಯ ಮೊದಲ ಪ್ಯಾರಾದಲ್ಲಿ " ದಿನಾಂಕ: 31-01-2017 " ಎಂಬುದರ ಬದಲಾಗಿ " ದಿನಾಂಕ: 31-03-2017 " ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

([illegible])
ಸರ್ಕಾರದ ಉಪ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1. ಜಿಲ್ಲಾ / ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು (ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಮುಖಾಂತರ)
2. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು.
3. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಮುಖ್ಯ ಶಿಕ್ಷಕರು.
1. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ( ಕ್ರ.ಸಂ. 2-4 ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ )

ಪ್ರತಿ ಇವರಿಗೆ ಮಾಹಿತಿಗಾಗಿ:-

2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
5. ಸಮಾಜ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

********

## ದೃಢೀಕರಣಕ್ಕಾಗಿಒಪ್ಪಿಗೆ

ಆಧಾರ್ ಸಂಖ್ಯೆ ಹೊಂದಿರುವ ನಾನು ಕರ್ನಾಟಕ ಸರ್ಕಾರ ಸಮಾಜ ಕಲ್ಯಾಣ ಇಲಾಖೆಗೆ ಯು.ಐ.ಡಿ.ಏ.ಐ. ವತಿಯಿಂದ ನನ್ನ ಆಧಾರ್ ಸಂಖ್ಯೆ, ಹೆಸರು ಹಾಗೂ ಬೆರಳಚ್ಚು / ಐರಿಸ್‌ಕುರಿತ ಮಾಹಿತಿಯನ್ನು ಪಡೆಯಲು ಈ ಮೂಲಕ ಒಪ್ಪಿಗೆ ನೀಡಿರುತ್ತೇನೆ. ಕರ್ನಾಟಕ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯು ಇಲಾಖೆಯ ಆಂತರಿಕ ಬಳಕೆಗೆ ಮಾತ್ರ ಈ ಮಾಹಿತಿಗಳನ್ನು ಬಳಸಿಕೊಂಡು ಆಧಾರ್‌ಸೀಡಿಂಗ್ ಹಾಗೂ ಡಿಬಿಟಿ ಅನುಷ್ಠಾನಕ್ಕಾಗಿ ಸಲುವಾಗಿ ಮಾತ್ರ ಬಳಸಲಾಗುವುದೆಂದು ತಿಳಿಸಿದ್ದು, ನನ್ನ ಬೆರಳಚ್ಚು / ಐರಿಸ್ ಮಾಹಿತಿಯನ್ನು ಯಾವುದೇರೀತಿ ಉಳಿಸಿಕೊಳ್ಳುವುದು / ಉಪಯೋಗಿಸಿಕೊಳ್ಳದೇ ಕೇವಲ ಸಿಐಡಿಆರ್ ನೊಂದಿಗೆ ದೃಢೀಕರಣಕ್ಕಾಗಿ ಮಾತ್ರ ಬಳಸಿಕೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ.

ಆಧಾರ ಸಂಖ್ಯೆಯನ್ನು ಹೊಂದಿರುವ ಅಭ್ಯರ್ಥಿಯ ಸಹಿ/ ಒಪ್ಪಿರುತ್ತೇನೆ.

## Consent for Authentication

I, the holder of Aadhaar number______________, hereby give my consent to Social Welfare Department, Government of Karnataka to obtain my Aadhaar number, Name and Fingerprint/Iris for authentication with UIDAI. The Social Welfare Department, Government of Karnataka has informed me that my identity information would only be used for the seeding within the department and for DBT purposes and also informed that my biometrics will not be stored / shared and will be submitted to CIDR only for the purpose of authentication.

Signature of the Aadhaar Number Holder/ I agree